ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ...

# ಆರ್‌ಸಿಯು ಧ್ವನಿ

R.C.U DHWANI

ಮಾರ್ಚ್ 2022 | ಸಂಪುಟ: 5 | ಸಂಚಿಕೆ 03 | ಪುಟಗಳು: 2 | ಖಾಸಗಿ ಪ್ರಚಾರಕ್ಕಾಗಿ ಮಾತ್ರ.....

# ಸಮಾಜದ ಪ್ರಗತಿಯಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಅಪಾರ






1). ಆರ್‌ಸಿಯು ಮರಾಠಿ ಅಧ್ಯಯನ ವಿಭಾಗ, ರೋಟರಿ ಇ-ಕ್ಲಬ್ ಹಾಗೂ ಏಕಲ ಅಭಿಯಾನದ ನೇತೃತ್ವದಲ್ಲಿ ವಂಟಮೂರಿ ಗ್ರಾಮದ ಸರ್ಕಾರಿ ಕನ್ನಡ ಶಾಲೆಯಲ್ಲಿ ಏರ್ಪಡಿಸಲಾದ ನೇತ್ರ ತಪಾಸಣೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ರಾಮಚಂದ್ರಗೌಡ ಮಾತನಾಡಿದರು. 2). ಆರ್‌ಸಿಯುದ ಮರಾಠಿ ಅಧ್ಯಯನ ವಿಭಾಗ ಮತ್ತು ವಸಂತ ವಾಖ್ಯಾನಮಾಲಾ ನೇತೃತ್ವದಲ್ಲಿ ಆಯೋಜಿಸಿದ ರಾಷ್ಟ್ರೀಯ ಸಂವಾದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ರಾಮಚಂದ್ರಗೌಡ ಅವರನ್ನು ಸನ್ಮಾನಿಸಲಾಯಿತು. ಪ್ರೊ. ವಿನೋದ ಗಾಯಕವಾಡ, ಮೀನಾ ಖಾನೋಲಕರ್, ಡಾ. ವಿನಯ ಮಡಗಾಂವಕರ್, ಪತ್ರಕರ್ತ ಪರೇಶ ಪ್ರಭು ಮತ್ತು ಮಾಧುರಿ ಶಾನಭಾಗ ಚಿತ್ರದಲ್ಲಿದ್ದಾರೆ.

**ವಂಟಮೂರಿ:** ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವುದರಲ್ಲಿ ಮಾತ್ರ ಸೀಮಿತಗೊಳ್ಳದೆ, ಸಮಾಜದ ಅವಶ್ಯಕತೆ ಅನುಗುಣವಾಗಿ ಕಾರ್ಯನಿರ್ವಹಿಸುವ ಮೂಲಕ ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿವೆ ಎಂದು ಆರ್‌ಸಿಯು ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಹೇಳಿದರು.

ಆರ್‌ಸಿಯು ಮರಾಠಿ ಅಧ್ಯಯನ ವಿಭಾಗ, ರೋಟರಿ ಇ-ಕ್ಲಬ್ ಹಾಗೂ ಏಕಲ ವಿದ್ಯಾಲಯದ ನೇತೃತ್ವದಲ್ಲಿ ವಂಟಮೂರಿಯ ಸರ್ಕಾರಿ ಕನ್ನಡ ಶಾಲೆಯಲ್ಲಿ ಏರ್ಪಡಿಸಲಾದ ನೇತ್ರ ತಪಾಸಣೆ ಮತ್ತು ಕನ್ನಡಕ ವಿತರಣೆ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಅನೇಕ ಪ್ರತಿಭೆ ಅಡಗಿರುತ್ತದೆ. ಅವುಗಳ ಅನಾವರಣಕ್ಕೆ ಸೂಕ್ತ ಪ್ರೋತ್ಸಾಹ ಮತ್ತು ಅವಕಾಶಗಳ ದೊರೆಯುವ ಅವಶ್ಯಕತೆಯಿರುವುದು. ಆ ನಿಟ್ಟಿನಲ್ಲಿ ಆರ್‌ಸಿಯು ಸದಾ ಕಾರ್ಯತತ್ಪರವಾಗಿದೆ. ವಿದ್ಯಾರ್ಥಿಗಳು ಸದಾ ಉನ್ನತ ಗುರಿಯನ್ನು ಹೊಂದಿರಬೇಕು ಮತ್ತು ಆ ಗುರಿ ತಲುಪಲು ಪ್ರಯತ್ನಶೀಲರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮರಾಠಿ ವಿಭಾಗದ ಮುಖ್ಯಸ್ಥ ಪ್ರೊ. ವಿನೋದ ಗಾಯಕವಾಡ ಮಾತನಾಡಿ, ಕರೋನಾ ಮಹಾಮಾರಿಯ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ಶಾಲೆಗಳ ತರಗತಿಗಳು ಸ್ಥಗಿತಗೊಂಡಿದ್ದವು. ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳನ್ನು ಮೊಬೈಲ್ ಮೂಲಕ ಪಡೆದು-ಕೊಂಡಿದ್ದಾರೆ. ಮೊಬೈಲ್ ಬಳಕೆಯಿಂದ ಮಕ್ಕಳ ಕಣ್ಣಿನ ಮೇಲೆ ದುಷ್ಪರಿಣಾಮಗಳು ಬೀರಿರುವ ಸಾಧ್ಯತೆಯಿದೆ. ಆದ್ದರಿಂದ ನೇತ್ರ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರೊ. ಅಶೋಕ ಡಿಸೋಜಾ, ಪ್ರೊ. ಚಂದ್ರಕಾಂತ ವಾಘ್ಮರೆ, ಪ್ರೊ. ಮನೀಷಾ ನೇಸರಕರ್, ಪ್ರೊ. ಅರವಿಂದ ಕರಿಬಸವನಗೌಡರ, ಸಹಾಯಕ ಪ್ರಾಧ್ಯಾಪಕ ಡಾ. ಮೈಜೊದ್ದೀನ್ ಮುತಾವಲಿ, ಮುಖ್ಯ ಶಿಕ್ಷಕಿ ಕೆ.ಬಿ. ಕಲ್ಪತ್ರಿ, ಅನಿಲ ಗುಡಿ ಮತ್ತು ಪುಷ್ಪಾಶ ಮಿರ್ಜಿ ಇದ್ದರು.

### ಸಂವಾದ ಕಾರ್ಯಕ್ರಮ

ಬೆಳಗಾವಿ ಜಿಲ್ಲೆಯಲ್ಲಿ ಕನ್ನಡ ಮತ್ತು ಮಾರಾಠಿ ಭಾಷಿಕರ ಮಧ್ಯ ಉತ್ತಮ ಬಾಂಧವ್ಯವಿದೆ. ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿ ಬೆಳಗಾವಿಯಲ್ಲಿ ಮರಾಠಿ ಮತ್ತು ಕನ್ನಡ ಭಾಷಿಕರು ಅನೋನ್ಯವಾಗಿ ಜೀವನ ನಡೆಸುತ್ತಿದ್ದಾರೆ ಎಂದು ಆರ್‌ಸಿಯು ಕುಲಪತಿ ಪ್ರೊ. ರಾಮಚಂದ್ರಗೌಡ ಹೇಳಿದರು.

ಆರ್‌ಸಿಯು ಮರಾಠಿ ವಿಭಾಗ ಮತ್ತು ವಸಂತ ವಾಖ್ಯಾನಮಾಲಾ ನೇತೃತ್ವದಲ್ಲಿ ಜರುಗಿದ ಗೋಮಾಂತಕ ಸಂಸ್ಕೃತಿ ಮತ್ತು ಸಾಹಿತ್ಯ ಎಂಬ ವಿಷಯದ ಒಂದು ದಿನದ ರಾಷ್ಟ್ರೀಯ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗೋವಾ ವಿಶ್ವವಿದ್ಯಾಲಯದ ಮರಾಠಿ ವಿಭಾಗದ ಪ್ರೊ. ವಿನಯ ಮಡಗಾಂವಕರ್ ಮಾತನಾಡಿ, ಗೋವಾ ಮತ್ತು ಬೆಳಗಾವಿಯು ನಿಕಟ ಸಂಬಂಧ ಹೊಂದಿವೆ. ಗೋವಾ ಮತ್ತು ಬೆಳಗಾವಿ ಮಧ್ಯ ಸಾಹಿತ್ಯ ಮತ್ತು ಸಾಂಸ್ಕೃತಿಕ ವಿನಿಮಯ ಪರಂಪರೆಯು ಅನಾದಿ ಕಾಲದಿಂದ ನಡೆದು ಬಂದಿದೆ ಎಂದರು.

ಮೀನಾ ಖಾನೋಲಕರ್, ಪತ್ರಕರ್ತ ಪರೇಶ ಪ್ರಭು, ಮಾಧುರಿ ಶಾನಭಾಗ, ಪ್ರಿಯಾಂಕಾ ಕೇಳಕರ್ ಮತ್ತು ಸ್ವರೂಪಾ ಇನಾಂದಾರ ಇದ್ದರು.

## 'ಪಂಡಿತ ದೀನದಯಾಳರ ತ್ಯಾಗ ನಮಗೆ ಆದರ್ಶ'



ಆರ್‌ಸಿಯುದಲ್ಲಿ ಜರುಗಿದ ಪಂಡಿತ ದೀನದಯಾಳ ಉಪಾಧ್ಯಾಯರ ಪುಣ್ಯಸ್ಮರಣೆ ಕಾರ್ಯಕ್ರಮದ ನಿಮಿತ್ತ ವಿವಿಯ ವಿದ್ಯಾಸಂಗಮ ಆವರಣದಲ್ಲಿ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಸಸಿ ನೆಟ್ಟರು. ಮೌಲ್ಯಮಾಪನ ಕುಲಸಚಿವ ಡಾ. ವೀರನಗೌಡ ಪಾಟೀಲ, ಹಣಕಾಸು ಅಧಿಕಾರಿ ಪ್ರೊ.ಡಿ.ಎನ್. ಪಾಟೀಲ ಚಿತ್ರದಲ್ಲಿದ್ದಾರೆ.

**ವಿದ್ಯಾಸಂಗಮ:** ಪಂಡಿತ ದೀನದಯಾಳ ಉಪಾಧ್ಯಾಯರು ತಮ್ಮ ಪೂರ್ಣ ಜೀವನವನ್ನು ಸಮಾಜ ಮತ್ತು ರಾಷ್ಟ್ರಕ್ಕೆ ಮೀಸಲಿಟ್ಟಿದ್ದರು. ಸಮಾಜದ ಕೊನೆಯ ವ್ಯಕ್ತಿಗೂ ಸರ್ಕಾರದ ಸಕಲ ಸವಲತ್ತುಗಳು ತಲುಪಬೇಕು ಎಂಬ ಉದಾತ್ತ ಚಿಂತನೆ ಹೊಂದಿದ್ದರು ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ನೇತೃತ್ವದಲ್ಲಿ ಶುಕ್ರವಾರ (11 ಫೆಬ್ರುವರಿ) ವಿಶ್ವವಿದ್ಯಾಲಯದ ಆವರಣದಲ್ಲಿ ಜರುಗಿದ ಪಂಡಿತ ದೀನದಯಾಳ ಉಪಾಧ್ಯಾಯ ಅವರ 54ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಯಂತಿ ಮತ್ತು ಪುಣ್ಯಸ್ಮರಣೆ ಕಾರ್ಯಕ್ರಮಗಳು ಇತ್ತೀಚೆಗೆ ನಿಮಿತ್ತ ಮಾತ್ರಕ್ಕೆ ಜರುಗುತ್ತಿರುವುದು ಬೇಸರದ ಸಂಗತಿ. ಹಾಗಾಗೀ ಪಂಡಿತ ದೀನದಯಾಳರ ಪುಣ್ಯಸ್ಮರಣೆ ನಿಮಿತ್ತ ವಿವಿ ಆವರಣದಲ್ಲಿ ಸಸಿ ನೆಡಲಾಗುವುದು ಮತ್ತು ಅಧ್ಯಯನ ಪೀಠದಿಂದ ದತ್ತು ಪಡೆದ ಕಲಾರಕೊಪ್ಪ ಗ್ರಾಮದಲ್ಲಿ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲು ತಿರ್ಮಾನಿಸಲಾಗಿದೆ. ಇನ್ನು ಮುಂದೆ ಎಲ್ಲ ಮಹಾತ್ಮರ ಜಯಂತಿ ಮತ್ತು ಪುಣ್ಯಸ್ಮರಣೆ ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ಆಚರಿಸಲಾಗುವುದು ಎಂದರು.

ಮೌಲ್ಯಮಾಪನ ಕುಲಸಚಿವ ಡಾ. ವೀರನಗೌಡ ಪಾಟೀಲ, ಹಣಕಾಸು ಅಧಿಕಾರಿ ಪ್ರೊ. ಡಿ.ಎನ್. ಪಾಟೀಲ, ವಿವಿಧ ವಿಭಾಗಗಳ ಮುಖ್ಯಸ್ಥರು, ನಿಖಾಯದ ಡೀನರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು. ಸಂಯೋಜಕ ಡಾ. ಪ್ರಕಾಶ ಕಟ್ಟಿಮನಿ ಸ್ವಾಗತಿಸಿದರು. ಪೀಠದ ಸಹಾಯಕ ಪ್ರಾಧ್ಯಾಪಕ ಡಾ. ಶಿವಲಿಂಗಯ್ಯ ಗೋಠೆ ನಿರೂಪಿಸಿದರು.

## ವಿದ್ಯಾರ್ಥಿಗಳಲ್ಲಿ ಜ್ಞಾನದ ದಾಹವಿರಬೇಕು



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಪ್ರೊ. ಸಾಬಣ್ಣ ತಳವಾರ ಅವರನ್ನು ಸನ್ಮಾನಿಸಲಾಯಿತು.

**ವಿದ್ಯಾಸಂಗಮ:** ವಿದ್ಯಾರ್ಥಿಗಳಲ್ಲಿ ಸಮಯಪ್ರಜ್ಞೆ ಇರಬೇಕು, ನಕರಾತ್ಮಕ ಆಲೋಚನೆಯಿಂದ ಹೊರ ಬರಬೇಕು. ಜೀವನದಲ್ಲಿ ಓದಬೇಕೆಂಬ ದಾಹ ಮತ್ತು ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವು ಹೆಚ್ಚಿರಬೇಕು ಎಂದು ಎಂಎಲ್‌ಸಿ ಪ್ರೊ. ಸಾಬಣ್ಣ ತಳವಾರ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿದ "ಸ್ನಾತ-ಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ಪ್ರವೇಶ ಪಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು 2021-22 ನೇ ಸಾಲಿನ ಅರ್ಥಶಾಸ್ತ್ರ ಸೊಸೈಟಿಯ" ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಯಶಸ್ಸಿನ ದಾರಿ ಯಾವತ್ತೂ ಸುಲಭವಾಗಿ ಇರುವುದಿಲ್ಲ. ಸತತ ಪ್ರಯತ್ನದಿಂದ ಗುರಿ ಮುಟ್ಟಬಹುದು ವಿದ್ಯಾರ್ಥಿ ಗಳಲ್ಲಿ ತಮ್ಮ ಗು-ರಿಯ ಬಗ್ಗೆ ಸ್ಪಷ್ಟತೆ ಇರಬೇಕು ಎಂದು ಹೇಳುತ್ತ ಅಧ್ಯಯನದಲ್ಲಿ ಅಂಕಗಳು ಮುಖ್ಯವಲ್ಲ ಜ್ಞಾನ ಗಳಿಸುವುದು ಮುಖ್ಯ, ಜ್ಞಾನ ಗಳಿಸುವ ಹಸಿವು-ಹಂಬಲ ಇರಬೇಕೆಂದು ಹೇಳಿದರು.

ಅರ್ಥಶಾಸ್ತ್ರದ ಬಗ್ಗೆ ಮೊದಲು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಸಂಶೋಧನೆಯಿಂದಲೇ ಜ್ಞಾನದ ವಿಸ್ತಾರ ಸಾಧ್ಯ. ಹಾಗಾಗೀ ಸಂಶೋಧನೆಯಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಭಾಗದ ಅಧ್ಯಕ್ಷ ಮತ್ತು ವಿವಿಯ ಹಣಕಾಸು ಅಧಿಕಾರಿ ಪ್ರೊ. ಡಿ. ಎನ್. ಪಾಟೀಲ, ಮಾತನಾಡಿ, ಅಸಾಧ್ಯವೆಂಬುದು ಮೂರ್ಖರ ಶಬ್ದಕೋಶದಲ್ಲಿರುತ್ತದೆ, ಯುವ ಜನಾಂಗದಲ್ಲಿ ಅದ್ಭುತಶಕ್ತಿ ಇದ್ದು, ವೃತ್ತಿ ಸಂಸ್ಕೃತಿ ಮತ್ತು ವೃತ್ತಿ ಭಾಧ್ಯತೆ ಹೊಂದಿದ್ದರೆ, ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯಾರ್ಥಿ ಪ್ರತಿನಿಧಿ ದೀಪಾ ಹಂಜೆ, ಸ್ನಾತ-ಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಬೋಧಕೇತರ ಸಿಬ್ಬಂದಿ ಕಾರ್ಯಕ್ರಮದಲ್ಲಿ ಇದ್ದರು.

ಸಹಾಯಕ ಪ್ರಾಧ್ಯಾಪಕ ಡಾ. ಕಿರಣ ಕುಮಾರ ಪಿ, ಪರಿಚಯಿಸಿದರು. ಗಾಯತ್ರಿ ತಳವಾರ ಪ್ರಾರ್ಥಿಸಿದರು. ರಮೇಶ ಭರಮವಡೆಯರ ಹಾಗೂ ರೂಪಾ ಸುತಾರ ನಿರೂಪಿಸಿದರು. ಇಂದ್ರತೇಜ ನಡೋಣಿ ವಂದಿಸಿದರು.



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳ 'ಆರ್‌ಸಿಯು ಧ್ವನಿ' ಪ್ರಾಯೋಗಿಕ ಪತ್ರಿಕೆಯ ಸಂಚಿಕೆಯನ್ನು ಕುಲಪತಿ ಪ್ರೊ.ಎಂ. ರಾಮಚಂದ್ರಗೌಡ ಬಿಡುಗಡೆಗೊಳಿಸಿದರು. ಹಣಕಾಸು ಅಧಿಕಾರಿ ಪ್ರೊ.ಡಿ.ಎನ್. ಪಾಟೀಲ, ಜೆಎಂಸಿ ವಿಭಾಗದ ಮುಖ್ಯಸ್ಥೆ ಪ್ರೊ. ಕಮಲಾಕ್ಷಿ ತಡಸದ ಮತ್ತು ಪ್ರೊ. ಅಶೋಕ ಡಿಸೋಜಾ, ಬೋಧಕೇತರ ಸಿಬ್ಬಂದಿ ಮೀನಾಕ್ಷಿ ಕಳ್ಳಿ, ಬೋಧಕ ಸಹಾಯಕಿಯರಾದ ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳು ಚಿತ್ರದಲ್ಲಿದ್ದಾರೆ.



ಆರ್‌ಸಿಯು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯಲ್ಲಿ ಜರುಗಿದ ನಾಡೋಜ ಚನ್ನವೀರ ಕಣವಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಡಾ. ಮಹೇಶ ಗಾಜಪ್ಪನವರ ಮಾತನಾಡಿದರು. ಡಾ. ಶೋಭಾ ನಾಯಕ ಚಿತ್ರದಲ್ಲಿದ್ದಾರೆ.

# ನಾಡೋಜ ಕವಿ ಕಣವಿಗೆ ನುಡಿನಮನ

**ವಿದ್ಯಾಸಂಗಮ:** ಇತ್ತೀಚೆಗೆ ನಿಧನ ಹೊಂದಿದ ಹಿರಿಯ ಕವಿ, ನಾಡೋಜ ಡಾ. ಚನ್ನವೀರ ಕಣವಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಬುಧವಾರ (16–02–2022) ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಡಾ. ಮಹೇಶ ಗಾಜಪ್ಪನವರ ಮಾತನಾಡಿ, ನಿಸರ್ಗ ಪ್ರೇಮ ಮತ್ತು ಮಾನವೀಯತೆಯ ಮೌಲ್ಯಗಳು ಕಣವಿ ಅವರ ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ಹಲವಾರು ಪ್ರಶಸ್ತಿಯನ್ನು ಪಡೆದಿದ್ದ ಶ್ರೀಯುತರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು. ಡಾ. ಶೋಭಾ ನಾಯಕ, ಫಕೀರಪ್ಪ ಸೊಗಲದ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭಾಷಾಂತರಕ್ಕೆ ಸತತ ಅಧ್ಯಯನ ಅಗತ್ಯ: ಪಾಟೀಲ

**ವಿದ್ಯಾಸಂಗಮ:** ಭಾಷಾಂತರ ಎಂಬುದು ಹುಟ್ಟಿನಿಂದ ಬರುವಂತಹುದಲ್ಲ. ನಿರಂತರ ಪ್ರಯತ್ನ ಹಾಗೂ ಅಧ್ಯಯನದಿಂದ ಒಳ್ಳೆಯ ಭಾಷಾಂತರಕಾರ ಆಗಬಹುದು ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸದಸ್ಯ, ಲೇಖಕ ರಾಘವೇಂದ್ರ ಪಾಟೀಲ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಯನ ವಿಭಾಗ ಹಾಗೂ ಬೆಂಗಳೂರಿನ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಸಹಯೋಗದಲ್ಲಿ (23 ಫೆಬ್ರುವರಿ 2022) ಬುಧವಾರ ಆಯೋಜಿಸಿದ್ದ, ಪ್ರಾಯೋಗಿಕ ಭಾಷಾಂತರ ತರಬೇತಿಯ ಎರಡು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭಾಷಾಂತರದ ಮೂಲಕ ಎಲ್ಲ ಕ್ಷೇತ್ರಗಳಲ್ಲೂ ಅವಕಾಶ ಗಿಟ್ಟಿಸಿಕೊಳ್ಳಬಹುದು ಎಂದು ಹೇಳಿದರು.

ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಮಾತನಾಡಿ, ಭಾಷಾಂತರಕ್ಕೆ ಸಾಂಸ್ಕೃತಿಕ ಜ್ಞಾನದ ಅವಶ್ಯಕತೆಯಿದೆ.



ಆರ್‌ಸಿಯು ಇಂಗ್ಲಿಷ್ ಅಧ್ಯಯನ ವಿಭಾಗ ಆಯೋಜಿಸಿದ ಭಾಷಾಂತರ ತರಬೇತಿಯ ಎರಡು ದಿನದ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಕುಲಸಚಿವ ಪ್ರೊ.ಬಸವರಾಜ ಪದ್ಮಶಾಲಿ ಮಾತನಾಡಿದರು.

ಭಾಷಾಂತರ ಕೌಶಲವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬೆಳವಣಿಗೆಗೆ ಬಹು ದೊಡ್ಡ ಪಾತ್ರ ವಹಿಸುತ್ತದೆ ಎಂದರು.

ವಿಭಾಗದ ಮುಖ್ಯಸ್ಥೆ ಡಾ. ನಾಗರತ್ನಾ ಪರಾಂಡೆ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ವಿಜಯ ನಾಗನ್ನವರ, ಡಾ. ಫಯಾಜ್ ಅಹ್ಮದ್ ಇಳಕಲ್ ಹಾಗೂ ಪತ್ರಕರ್ತ ಗಿರೀಶ ಪಟ್ಟಣಶೆಟ್ಟಿ ಇದ್ದರು.

ಪೂಜಾ ಹಲ್ಯಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುಷ್ಪಾ ವಡ್ಡರ ಪ್ರಾರ್ಥಿಸಿದರು. ಡಾ. ಕವಿತಾ ಕುಸಗಲ್ಲ ಸ್ವಾಗತಿಸಿದರು. ಜೀಜಾಬಾಯಿ ಬಳವಾಟ ವಂದಿಸಿದರು. ವಿನಾಯಕ ನಂದಿ ಹಾಗೂ ಗಿರಿಯಪ್ಪ ವಿಟ್ಟಪ್ಪನ್ನವರ ನಿರೂಪಿಸಿದರು.

# ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ: ಪ್ರೊ. ಪಾಟೀಲ

**ವಿದ್ಯಾಸಂಗಮ:** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಒಂದು ಕ್ಷಣವನ್ನು ವ್ಯರ್ಥಗೊಳಿಸದೆ, ವಿದ್ಯಾರ್ಥಿಗಳು ಸತತ ಅಧ್ಯಯನದಲ್ಲಿ ತೊಡಗಿದಾಗ ಮಾತ್ರ ಜೀವನದಲ್ಲಿ ಯಶಸ್ಸು ಹೊಂದುತ್ತಾರೆ ಎಂದು ಆರ್‌ಸಿಯು ಮೌಲ್ಯಮಾಪನ ಕುಲಸಚಿವ ಡಾ.ವೀರನಗೌಡ ಪಾಟೀಲ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಬುಧವಾರ ಜರುಗಿದ ಪ್ರಥಮ ವರ್ಷ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಎಲ್ಲ ಮಹಾತ್ಮರು ಮತ್ತು ಸಾಧಕರು ತಮ್ಮ ಬಾಲ್ಯ ಮತ್ತು ವಿದ್ಯಾರ್ಥಿ ಬದುಕಿನಲ್ಲಿ ಅನೇಕ ಸಂಕಷ್ಟ ಎದುರಿಸಿದ್ದಾರೆ. ಆ ಎಲ್ಲ ಎದುರಿಸಿದ ಸವಾಲುಗಳನ್ನು ಮೆಟ್ಟಿ ನಿಂತು ತಮ್ಮ ಉಜ್ವಲ ಭವಿಷ್ಯ ಮತ್ತು ಬದುಕನ್ನು ಕಟ್ಟಿ–ಕೊಂಡಿದ್ದಾರೆ. ಡಾ. ಅಂಬೇಡ್ಕರ್ ಮತ್ತು ಇತ್ತೀಚಿನ ಪೊಲೀಸ್ ಅಧಿಕಾರಿ ರವಿ ಚನ್ನನ್ನವರ ಇವರೆಲ್ಲರ ಜೀವನ ಮತ್ತು ಸಾಧನೆ ನಮಗೆ ಪ್ರೇರಣೆಯಾಗಬೇಕು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಅಗಮಿಸಿದ್ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಭಾರಿ ಅಧ್ಯಕ್ಷೆ ಪ್ರೊ. ಕಮಾಲಾಕ್ಷಿ ತಡಸದ ಮಾತನಾಡಿ, ಉನ್ನತ ಶಿಕ್ಷಣ ವಿದ್ಯಾರ್ಥಿಗಳ ಬಾಳನ್ನು ಬಂಗಾರ ಮಾಡುವುದು. ಆದ್ದರಿಂದ ಉನ್ನತ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಪಡೆಯುವ ವಿದ್ಯಾರ್ಥಿಗಳು ಸದಾ ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿರಬೇಕು. ಸಂಶೋಧನೆ, ಹೊಸ ವಿಷಯಗಳ ಅಧ್ಯಯನ, ಪ್ರಚಲಿತ ವಿದ್ಯಮಾನಗಳ ತಿಳಿಯುವ ಆಸಕ್ತಿ ವಿದ್ಯಾರ್ಥಿಗಳದ್ದಾಗಿರಬೇಕು. ಟಾಟಾ ಸಮೂಹಗಳ ಮುಖ್ಯಸ್ಥ ರತನ ಟಾಟಾ ಅವರಂತೆ ಹೆಚ್ಚಿನ ಓದು ಮತ್ತು ಸರಳ ಜೀವನದ ಗುಣಗಳನ್ನು ನಾವು ಕೂಡಾ ಪಾಲಿಸಬೇಕು ಎಂದು ಹೇಳಿದರು.

ವಿಭಾಗದ ಮುಖ್ಯಸ್ಥೆ ಪ್ರೊ. ಚಂದ್ರಿಕಾ. ಕೆ.ಬಿ ಅಧ್ಯಕ್ಷತೆ ವಹಿಸಿದ್ದರು.ಡಾ. ರವಿ ದಳವಾಯಿ, ಡಾ. ಜಿ.ಕೆ. ಮಂಜುಳಾ, ಲಕ್ಷ್ಮಿ ಮಗದುಮ್, ಶಂಕರ ಪೂಜೇರಿ, ರವೀಂದ್ರ ಸುಣಗಾರ, ಅಕ್ಷತಾ ಕೋಲಕಾರ್ ಮತ್ತು ಐಶ್ವರ್ಯ ಪಾಟೀಲ ಇದ್ದರು.

ಶಿಲ್ಪಾ ಕುರಿ, ಅಕ್ಷತಾ ಶಗುಣಸಿ ಮತ್ತು ಉಮಾದೇವಿ ಸಿ. ಪ್ರಾರ್ಥಿಸಿದರು. ಸಮಾಜಶಾಸ್ತ್ರ ಒಕ್ಕೂಟದ ಅಧ್ಯಕ್ಷ ಡಾ. ಸುಮಂತ ಹಿರೇಮಠ ಪರಿಚಯಿಸಿದರು. ಅದಿತಿ ಕುಮಾರಿ ನಿರೂಪಿಸಿದರು. ಅಕ್ಷತಾ ನಾಯ್ಕರ್ ವಂದಿಸಿದರು.

## ನೀವು ಬರೆಯಿರಿ.....



**'ಆರ್‌ಸಿಯು ಧ್ವನಿ'** ಪತ್ರಿಕೆಯು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯಾಗಿದೆ. ಈ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಲೇಖನ, ಸುದ್ದಿ ಮತ್ತು ವರದಿಗಳ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಮೆಚ್ಚುಗೆ ಬರೆದು ಕಳುಹಿಸಬಹುದು. ವಿದ್ಯಾರ್ಥಿಗಳು ಸಿದ್ಧಪಡಿಸುವ ಈ ಪತ್ರಿಕೆಗೆ ತಾವು ನೀಡುವ ಸಕಾರಾತ್ಮಕ ಸಲಹೆಗಳು ವಿದ್ಯಾರ್ಥಿಗಳ ಬರವಣಿಗೆಯ ಸುಧಾರಣೆಗೆ ದಾರಿದೀಪವಾಗುವವು.

## ವರದಿಗೆ ಆಹ್ವಾನ

ನಿಮ್ಮ ವಿಭಾಗದಲ್ಲಿ ಜರುಗುವ ಕಾರ್ಯಕ್ರಮಗಳ ವರದಿಗಳನ್ನು ಕಳುಹಿಸಿ. ಅಷ್ಟೇ ಅಲ್ಲದೆ ತಮ್ಮ ಸ್ವ–ಲಿಖಿತ ಲೇಖನಗಳನ್ನು ಕೆಳಗೆ ತಿಳಿಸಿದ ಇಮೇಲ್‌ಗೆ ಕಳುಹಿಸಬಹುದು. ಯುವ ಮನದ ತಲ್ಲಣ, ಕ್ಯಾಂಟಿನ್ ಕಲರವ, ಹಾಸ್ಟೇಲ್ ಬದುಕಿನ ಚಿತ್ತಾರ, ಬಸ್ ಪ್ರಯಾಣದ ಪ್ರಸಂಗಗಳು ಹೀಗೆ ನಿಮ್ಮೆಲ್ಲ ಅನುಭವದ ಸದಭಿರುಚಿ ಲೇಖನಗಳನ್ನು ಕಳುಹಿಸಬಹುದು. ಆಯ್ದ ಲೇಖನಗಳನ್ನು **'ಆರ್‌ಸಿಯು ಧ್ವನಿ'** ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**dhwani@rcub.ac.in**

# ವಿದ್ಯಾರ್ಥಿ ದೆಸೆಯಲ್ಲಿಯೇ ಹಣ ಉಳಿತಾಯದ ಮಹತ್ವ ಅರಿಯಿರಿ

**ವಿದ್ಯಾಸಂಗಮ:** ಮನುಷ್ಯನ ಕಷ್ಟಕಾಲದಲ್ಲಿ ಆತ ಉಳಿತಾಯ ಮಾಡಿದ ಹಣದ ನೆರವಿನಿಂದ ಎದುರಾದ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದು ಎಂದು ಆರ್‌ಸಿಯು ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕರಿಯರ್ ಗೈಡನ್ಸ್, ಟ್ರೈನಿಂಗ್ ಮತ್ತು ಪ್ಲೆಸ್‌ಮೆಂಟ್ ಸೆಲ್, ಸೆಕ್ಯೂರಿಟಿಸ್ ಆ್ಯಂಡ್ ಎಕ್ಸ್‌ಚೆಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಮತ್ತು ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಸೆಕ್ಯೂರಿಟಿಸ್ ಮಾರ್ಕೆಟ್ (ಎನ್‌ಐಎಸ್‌ಎಂ) ಸಹಯೋಗದಲ್ಲಿ ಸೋಮವಾರ (24–01–2022) ವಿವಿಯಲ್ಲಿ ಜರುಗಿದ ಫೈನಾನ್‌ಶಿಯಲ್ ಎಜ್ಯುಕೇಷನ್ ಫಾರ್ ಯಂಗ್ ಸಿಟಿಜನ್ಸ್ ಕಾರ್ಯಗಾರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಉಳಿತಾಯ ಮತ್ತು ಕೂಡಿಟ್ಟ ಹಣವು ವೃದ್ಧಾಪ್ಯ ಮತ್ತು ಕಷ್ಟದ ಸಮಯಕ್ಕೆ ಬಹಳ ನೆರವಾಗುತ್ತದೆ. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿ ಮತ್ತು ವಿದ್ಯಾರ್ಥಿ ದೆಸೆಯಲ್ಲಿಯೆ ಹಣದ ಉಳಿತಾಯದ ಮಹತ್ವ ಅರಿಯುವುದು ಸೂಕ್ತ. ಆರ್ಥಿಕತೆ, ಉಳಿತಾಯ, ಷೇರು ಮಾರುಕಟ್ಟೆ ಹೀಗೆ ಅನೇಕ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ತಮ್ಮ ಉಳಿತಾಯದ ಸ್ವಲ್ಪ ಭಾಗವನ್ನು ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಬ್ಯಾಂಕ್ ಮತ್ತು ಅಂಚೆ ಕಚೇರಿಯಲ್ಲಿ ಮಾತ್ರವಲ್ಲದೆ ಷೇರು ಮಾರುಕಟ್ಟೆಯಲ್ಲಿ ಹಣ




ಆರ್‌ಸಿಯುದಲ್ಲಿ ಕರಿಯರ್ ಗೈಡನ್ಸ್, ಟ್ರೈನಿಂಗ್ ಮತ್ತು ಪ್ಲೆಸ್‌ಮೆಂಟ್ ಸೆಲ್ ಮತ್ತು ಸೆಬಿ ಸಹಯೋಗದಲ್ಲಿ ಜರುಗಿದ ಫೈನಾನ್‌ಶಿಯಲ್ ಎಜ್ಯುಕೇಷನ್ ಫಾರ್ ಯಂಗ್ ಸಿಟಿಜನ್ಸ್ ಕಾರ್ಯಗಾರಕ್ಕೆ ಕುಲಸಚಿವ ಪ್ರೊ.ಬಸವರಾಜ ಪದ್ಮಶಾಲಿ ಚಾಲನೆ ನೀಡಿದರು.

ಹೂಡಿಕೆ ಮಾಡುವುದು ಮತ್ತು ಲಾಭ ಪಡೆಯುವ ಬಗೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಈ ಕಾರ್ಯಾಗಾರ ಆಯೋಜಿಸಲಾಗಿದೆ. ಈ ಕಾರ್ಯಾಗಾರದ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆಯಬೇಕು ಎಂದರು.

ಎಂಬಿಎ ವಿಭಾಗದ ಸಹಾಯಕ ಪ್ರಾಧ್ಯಾಪಕ ಮತ್ತು ಸೆಬಿ ನೋಂದಾಯಿತ ಸಂಪನ್ಮೂಲ ವ್ಯಕ್ತಿ ಡಾ. ಮಹಾಂತೇಶ ಕುರಿ ಮಾತನಾಡಿ, ಸೆಕ್ಯೂರಿಟಿ, ಆರ್ಥಿಕ ವಲಯ, ಮ್ಯೂಚವಲ್ ಫಂಡ್, ಹಣ ಹೂಡಿಕೆ, ಲಾಭಾಂಶ ವಿಷಯಗಳ ಕುರಿತಾಗಿ ಸವಿವರ ಮಾಹಿತಿ ವಿದ್ಯಾರ್ಥಿಗಳಿಗೆ ನೀಡಿದರು.

ಈ ಎರಡು ದಿನದ ಕಾರ್ಯಾಗಾರದಲ್ಲಿ ಎಂಟು ಮುಖ್ಯ ವಿಷಯಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸಲಾಗುವುದು. ಉಳಿತಾಯದ ಮಹತ್ವ, ಆರ್ಥಿಕ ಹೂಡಿಕೆಯ ಅವಕಾಶಗಳು, ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ, ಮ್ಯೂಚುವಲ್ ಫಂಡ್, ಹಣ ಹೂಡಿಕೆಯ ಮುನ್ನೆಚ್ಚರಿಕೆ ಕ್ರಮಗಳು, ಷೇರು ಮಾರುಕಟ್ಟೆಯ ವೃತ್ತಿ ಅವಕಾಶಗಳ ಬಗ್ಗೆ ಕಾರ್ಯಾಗಾರದಲ್ಲಿ ವಿವಿಧ ಸಂಪನ್ಮೂಲ ವ್ಯಕ್ತಿಗಳು ಚರ್ಚಿಸಲಿದ್ದಾರೆ.

ಐಕ್ಯೂಎಸಿ ನಿರ್ದೇಶಕ ಪ್ರೊ. ಶಿವಾನಂದ ಗೋರ್ನಾಳೆ, ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಪ್ಲೆಸಮೆಂಟ್ ಅಧಿಕಾರಿ ಡಾ.ರಿಯಾಜ್ ಮನಗೂಳಿ ಸ್ವಾಗತಿಸಿದರು. ಐಕ್ಯೂಎಸಿ ವಿಭಾಗದ ಫರ್ಜಾನಾ ಶಿಪಾಯಿ ನಿರೂಪಿಸಿದರು. ಪ್ರೊ. ವಿನಾಯಕ ಬಂಕಾಪುರ ವಂದಿಸಿದರು.

ಮಾರ್ಗದರ್ಶಕರು: ಪ್ರೊ. ಕಮಲಾಕ್ಷಿ ಜಿ. ತಡಸದ, ಸಂಪಾದಕರು: ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ ಮತ್ತು ಅರುಣ ಹೊಸಮಠ. ಉಪಸಂಪಾದಕರು: ಪ್ರಥಮ ಮತ್ತು ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಆರ್.ಸಿ.ಯು ಬೆಳಗಾವಿ,
ಪ್ರಕಾಶನ ಮತ್ತು ಮುದ್ರಣ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಭೂತರಾಮನಹಟ್ಟಿ, ಬೆಳಗಾವಿ–591156.